ಶ್ರೀ ಎನ್. ಹುಚ್ಚಮಾಸ್ತಿ ಗೌಡ :- ನಾನು ಮೊದಲೇ ಹೇಳಿದ ಪ್ರಕಾರ ನಮ್ಮ ರಿಜಿಸ್ಟ್ರಾರ್ ಅವರಿಗೆ ಈಗಿನ ಕಾನೂನು ಪ್ರಕಾರ ಅದರ ಬಗ್ಗೆ ಏನೂ ಅಧಿಕಾರವಿಲ್ಲವೆಂದು ಹೇಳಿದ್ದೇನೆ. ಪೋಲೀಸಿನವರು ಯಾವ ಕಾರಣದ ಮೇಲೆ ಅಕೌಂಟ್ಸ್ ಸೀಜ್ ಮಾಡಿದ್ದಾರೆಂಬುದು ನನಗೆ ಗೊತ್ತಿಲ್ಲ. ಆ ವಿಷಯ ತಿಳಿದು ನಾನು ಈ ಸಭೆಗೆ ತಿಳಿಸುತ್ತೇನೆ.

SALE OF ADULTERATED ARRACK AND TODDY IN HOSPET

107. SRI B. SATHYANARYANA SINGH (Hospet):—Will the Chief Minister be pleased to state :—

(*a*) the number of cases launched against selling of adulterated arrack and toddy during the last year in Hospet, Hospet Taluk and Bellary District ;

(*b*) the number of cases in which the vendors have been punished by the Courts ;

(*c*) whether it has come to the notice of the Government that instead of toddy tapped from toddy trees only toddy prepared out of hydro-chloride is being sold as toddy all over Bellary District ?

SRI H. M. CHANNABASAPPA (Minister for Public works and Electricity) On behalf of. SRI D. DEVARAJ URS. (Chief Minister):—

(*a*) Six are under investigation and five are before the Court.

(*b*) They are pending before the Court

(*c*) No toddy can be prepared from Hydro-chloride

ಶ್ರೀ ಬಿ. ಸತ್ಯನಾರಾಯಣಸಿಂಗ್. -(ಅ)ಗೆ ಉತ್ತರದಲ್ಲಿ ಹೇಳಿರುವ ಪ್ರಕಾರ ಈ ಆರು ಕೇಸುಗಳು ಎಷ್ಟು ಕಾಲದಿಂದ ಇನ್‌ವೆಸ್ಟಿಗೇಷನ್ನಿನಲ್ಲಿದೆ ?

(ಶ್ರೀ ಬಿ. ಸತ್ಯನಾರಾಯಣ ಸಿಂಗ್)

ಮತ್ತು ಕೋರ್ಟಿನಲ್ಲಿರತಕ್ಕ ಐದು ಕೇಸುಗಳಿಗೆ ಸಂಬಂಧಪಟ್ಟ ಗುತ್ತಿಗೆದಾರರು ಯಾರು? ಅವರ ಹೆಸರುಗಳೇನೆಂಬ ಬಗ್ಗೆ ವಿವರಗಳನ್ನು ಕೊಡುತ್ತೀರಾ?

ಶ್ರೀ ಹೆಚ್. ಎಂ. ಚನ್ನಬಸಪ್ಪ. ಇನ್‌ವೆಸ್ಟಿಗೇಷನ್ನಿನಲ್ಲಿರತಕ್ಕ ಆರು ಕೇಸುಗಳ ಬಗ್ಗೆ ಎಫ್. ಐ. ಆರ್. ಮೇ 1972ರಿಂದಲೂ ಇದೆ ಎರಡನೆಯದಾಗಿ 6 ಕೇಸುಗಳ ಗುತ್ತಿಗೆದಾರರು ಯಾರೆಂಬ ಬಗ್ಗೆ ಅವರ ಹೆಸರುಗಳು ನನ್ನ ಮುಂದೆ ಇಲ್ಲ.

ಶ್ರೀ ಬಿ. ಸತ್ಯನಾರಾಯಣಸಿಂಗ್. – ಆರು ಕೇಸುಗಳು ಇನ್ನೂ ಇನ್‌ವೆಸ್ಟಿಗೇಷನ್ನಿನಲ್ಲಿಯೇ ಇದೆ ಎಂದು ಹೇಳುತ್ತಾ ಇರುವುದರಿಂದ, ಇದನ್ನು ಮುಗಿಸುವುದಕ್ಕೆ ಇನ್ನೆಷ್ಟು ಕಾಲಬೇಕಾಗಬಹುದು ?

ಶ್ರೀ ಎಚ್. ಎಂ. ಚನ್ನಬಸಪ್ಪ. – ಇನ್‌ವೆಸ್ಟಿಗೇಷನ್ ಮಾಡುವುದಕ್ಕೆ ಕಾಲಾವಧಿಯನ್ನು ನಿಗದಿ ಮಾಡಿ ಹೇಳುವುದಕ್ಕಾಗುವುದಿಲ್ಲ. ಅದು ಅಯಾಯ ಕೇಸುಗಳ ಪರಿಸ್ಥಿತಿಯನ್ನು ಅವಲಂಬಿಸುತ್ತದೆ. ಅದ್ದರಿಂದ ಈಗಲೇ ಅದರ ಇನ್‌ವೆಸ್ಟಿಗೇಷನ್ನಿಗೆ ಇಷ್ಟೇ ಕಾಲ ಹಿಡಿಯುತ್ತದೆ, ಇಷ್ಟೇ ಕಾಲದಲ್ಲಿ ಅದು ಪೂರೈಸುತ್ತದೆಂದು ಹೇಳುವುದು ಕಷ್ಟವಾಗುತ್ತದೆ.

ಶ್ರೀ ಬಿ. ಸತ್ಯನಾರಾಯಣಸಿಂಗ್. – ಈಗ ಇದು ಬಳ್ಳಾರಿ ಜಿಲ್ಲೆಗೆ ಸಂಬಂಧಪಟ್ಟಹಾಗೆ ಪ್ರಶ್ನೆ ಕೇಳಿರುವುದು. ಅಲ್ಲಿನ ತಾಲ್ಲೂಕು ಬೋರ್ಡ್‌ನಿಂದ ಹೆಂಚು ಸರಾಯಿ ಮಾರುವುದು ಜಾಸ್ತಿಯಾಗುತ್ತಿದೆ. ಗುತ್ತಿಗೆದಾರರ ಕೈಲಿ ಅಲ್ಲಿನ ಅಧಿಕಾರಿಗಳು ಕೈಗೊಂಬೆಗಳಂತಾಗಿದ್ದಾರೆ. ಇದುವರೆಗೂ ಅದರ ಬಗ್ಗೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕಾಗಲಿಲ್ಲ. ಅದ್ದರಿಂದ ಈಗಲಾದರೂ ಹೆಚ್ಚು ಶಕ್ತಿಯುತವಾಗಿ ಇದನ್ನು ಹೋಗಲಾಡಿಸಲು ತಮ್ಮ ಮುಂದೆ ಏನಾದರೂ ಕಾರ್ಯಕ್ರಮ ಇದೆಯೇ ?

ಶ್ರೀ ಹೆಚ್. ಎಂ. ಚನ್ನಬಸಪ್ಪ. – ಈಗ ಮಾಹಿತಿಯನ್ನು ಮಾನ್ಯ ಸದಸ್ಯರು ಕೊಡುತ್ತಿದ್ದಾರೆ. ಅದಕ್ಕೋಸ್ಕರ ವಿಶೇಷ ಸಿಬ್ಬಂದಿಯನ್ನು ಏರ್ಪಾಡುಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ಹಾಗೇನಾದರೂ ಅಕ್ರಮಗಳು ಹೆಚ್ಚಾಗುತ್ತಾ ಇದ್ದರೆ, ಅದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತೆ ೀವೆ.

ಶ್ರೀ ಎಂ. ಬಿ. ರಾಮಸ್ವಾಮಿ. —(ಬಿ)ಗೆ ಉತ್ತರವಾಗಿ ಅವು ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಉಳಿದಿವೆ, ಎಂದು ಹೇಳಿದೆ. ಆ ಐದು ಕೇಸುಗಳಿಗೆ

ಮಾಡಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಹಾಗಿದ್ದರೆ ಅದನ್ನು ತಪ್ಪಿಸುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ :....ಮಾನಾಪಲಿ ಟೆಂಡೆನ್ಸಿ ಬ್ರೇಕ್ ಮಾಡಬೇಕೆಂಬುದು ಸರ್ಕಾರದ ಉದ್ದೇಶ. ಹಾಗೆ ಮಾಡುವಾಗ ಸರ್ಕಾರಕ್ಕೆ ಬರುವ ಉತ್ಪತ್ತಿ ಕೂಡ ಕಡಿಮೆಯಾಗದ ಹಾಗೆ ನೋಡಿಕೊಳ್ಳಬೇಕಾಗುತ್ತದೆ.

ಶ್ರೀ ಸಿ. ಅಂದಾನಪ್ಪ :.... ತಾವು ಲಾಭದಾಯಕವಾಗಿದ್ದರೆ ಮಾಡುತ್ತೇವೆಂದು ಹೇಳಿದ್ದೀರಿ. ತಾವು ಜಿಲ್ಲಾವಾರು, ಗ್ರೂಪ್‌ಮೈಸ್ ಮತ್ತು ಶಾಪ್‌ಮೈಸ್ ಹರಾಜು ಮಾಡಿ ಹೆಚ್ಚು ಆದಾಯ ಯಾವುದರಿಂದ ಬರುತ್ತದೆ ಅದನ್ನು ತೆಗೆದು ಕೊಳ್ಳುತ್ತೇವೆಂದು ಹೇಳಿದ್ದೀರಿ: ಬೇರೆ ಕಡೆ ಜಿಲ್ಲಾವಾರು ಮಾಡುತ್ತೀರಿ. ಅದ್ದರಿಂದ ಈ ಜಿಲ್ಲಾವಾರು ಹರಾಜು ತೆಗೆದುಕೊಳ್ಳುವುದಕ್ಕೆ ಯಾರಅಭ್ಯಂತರವೂ ಇಲ್ಲ. ಇದ್ದರಿಂದ ಅದನ್ನು ಮಾಡುತ್ತೀರಾ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ :....ಮಾಡಬೇಕೆಂದು ಹೇಳುವುದು ಸ್ವಾಧಾವಿಕ. ಎಷ್ಟು ಮಟ್ಟಿಗೆ ಮಾಡುವುದು ಸಾಧ್ಯವೆಂಬುದನ್ನು ನೋಡಬೇಕು. ತಾವು ಹೇಳಿದಂತಹ ನಲಹೆಯನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಸಾರ್ವಜನಿಕರ ಅನುಕೂಲ ಮತ್ತು ಸರ್ಕಾರಕ್ಕೆ ಬರತಕ್ಕ ಆದಾಯ-ಇವೆರಡನ್ನು ನೋಡಿಕೊಂಡು ಅನುಕೂಲ ಮಾಡುವುದಕ್ಕೆ ಯೋಚನೆ ಮಾಡುತ್ತೇವೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್ :....ಬಳ್ಳಾರಿ ಜಿಲ್ಲೆಯಲ್ಲಿ ಕೇವಲ ಆರಕ್‌ದ ವಿಚಾರದಲ್ಲಿ ಅಂಗಡಿಮೈಸ್ ಹರಾಜು ಮಾಡಿ, ಸೇಂದಿಯನ್ನು ಮೂತ್ರ ಜಿಲ್ಲಾವಾರು ಹರಾಜು ಮಾಡಿದ್ದಾರೆ. ಇದರಿಂದ ಸುಮಾರು 9 ಲಕ್ಷ ರೂಪಾಯಿ ನಷ್ಟವಾಗಿದೆ. ಆದ್ದರಿಂದ ಸೇಂದಿಯನ್ನು ಸಹ ಅಂಗಡಿವಾರು ಹರಾಜು ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಹೆಚ್. ಎಂ ಚೆನ್ನಬಸಪ್ಪ :....ಬಳ್ಳಾರಿ ಜಿಲ್ಲೆ ಒಂದೇ ಅಲ್ಲ; ಎಲ್ಲಾ ಜಿಲ್ಲೆಗಳಲ್ಲಿ ಕೂಡ ಹೀಗೆ ಆಗುವುದು ಉತ್ತಮ ಎಂಬುದನ್ನು ಯೋಚನೆ ಮಾಡಿ ಮಾಡಬೇಕಾಗುತ್ತದೆ. ಮತ್ತು ಮಾನ್ಯ ಸದಸ್ಯರು ಕೊಟ್ಟಿರತಕ್ಕಂತಹ ಸಲಹೆಗಳೇನಿವೆ, ಅವುಗಳೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಮತ್ತು ಸರ್ಕಾರದ ಹಿತವನ್ನು ಸಹ ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ ಯೋಚನೆ ಮಾಡುತ್ತೇವೆ.

ಅಧ್ಯಕ್ಷರು —ಶ್ರೀ ರಾಮುಲು ಅವರು ಪ್ರಶ್ನೆ ಸಂ. 13 ಕೇಳಬಹುದು.

ಶ್ರೀ ಕೆ. ಶ್ರೀರಾಮುಲು.—ಈ ಪ್ರಶ್ನೆಯನ್ನು ತಡೆಹಿಡಿಯಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಹಾಕಿದ್ದರೆ ಅದು ಅಬ್ಸ್ಟ್ ಆಗುತ್ತದೆ.

DELAY IN ISSUE OF COFFEE REGISTRATION CERTIFICATES

63 SRI G. PUTTASWAMY (Mudigere).—Will the Minister for Revenue be pleased to state :—

(*a*) the number of applications for coffee registration certificates received during 1971—72

(*b*) the number of certificates issused during the year;

(*c*) the number of applications pending and since how long;

(*d*) the reasons for the delay?

Sri N. HUTCHAMASTHY GOWDA (Minister for Revenue).—

(*a*) 2572

(*b*) 1,827

(*c*) 23 cases relate to 1970-71. 83 cases relate to 1971-72. 659 cases since 6 months.

(*d*) Delay due to non-production of the required documents and other formalities

ಶ್ರೀ ಜಿ. ಪುಟ್ಟಸ್ವಾಮಿ.—ನನ್ನ (ಈ) ಪ್ರಶ್ನೆಗೆ ಉತ್ತರವಾಗಿ ಇತರ ನಿಯಮಗಳು ಹಾಗೂ ದಾಖಲೆಗಳ ಅಗತ್ಯತೆಯಿಂದಾಗಿ ವಿಳಂಬವಾಗಿದೆ ಎಂದು ಹೇಳಿದ್ದೀರಿ, ಆ ನಿಯಮಗಳು ಹಾಗೂ ದಾಖಲೆಗಳ ಅಗತ್ಯತೆ ಯಾವುದು ಎಂಬುದನ್ನು ಹೇಳುತ್ತೀರಾ?